**ಕರ್ನಾಟಕ ಸರ್ಕಾರದ ನಡವಳಿಗಳು**

*ವಿಷಯ:-* ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ರಾಯಚೂರು ಜಿಲ್ಲಾ ಪಂಚಾಯತ್‌ಗೆ ಬಿಡುಗಡೆಯಾದ ಅನುದಾನವನ್ನು ಸಮರ್ಪಕವಾಗಿ ಬಳಸದೇ ಹಣ ದುರುಪಯೋಗಪಡಿಸಿಕೊಂಡಿರುವ ಪ್ರಕರಣದ ಕುರಿತು ತನಿಖೆ ಕೈಗೊಳ್ಳಲು ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ-1984 ರ ಕಲಂ 7(2ಎ)ರ ಅನುಸಾರ ಗೌರವಾನ್ವಿತ ಉಪಲೋಕಾಯುಕ್ತರಿಗೆ ವಹಿಸಿದ್ದನ್ನು ಹಿಂಪಡೆಯುವ ಬಗ್ಗೆ ಆದೇಶ.

*ಓದಲಾಗಿದೆ:-*

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 12 ಇಎನ್‌ಕ್ಯೂ 2015, ದಿನಾಂಕ:28.10.2015.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ಇವರ ಪತ್ರ ಸಂಖ್ಯೆ:ಜಿಪರಾ/ಸಿಬ್ಬಂದಿ-1/29/2015-16/4730, ದಿನಾಂಕ:21.3.2016.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 12 ಇಎನ್‌ಕ್ಯೂ 2015, ದಿನಾಂಕ:12.9.2016.
4. ವಿಚಾರಣಾ ವರದಿ ದಿನಾಂಕ:25.7.2016.
5. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 12 ಇಎನ್‌ಕ್ಯೂ 2015, ದಿನಾಂಕ:21.4.2018.
6. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 12 ಇಎನ್‌ಕ್ಯೂ 15, ದಿನಾಂಕ:26.4.2018, ದಿ:18.6.2018 ಮತ್ತು 09.7.2018

******

***ಪ್ರಸ್ತಾವನೆ:-***

ಕಾರ್ಯದರ್ಶಿ, ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇವರು ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:07.1.2015 ರ ಪತ್ರದೊಂದಿಗೆ ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ರಾಯಚೂರು ಜಿಲ್ಲಾ ಪಂಚಾಯತ್‌ಗೆ ಬಿಡುಗಡೆಯಾದ ಅನುದಾನವನ್ನು ಅಲ್ಲಿನ ಅನುಷ್ಠಾನಾಧಿಕಾರಿಗಳು ಸಮರ್ಪಕವಾಗಿ ಬಳಸದೇ ಹಣ ದುರ್ಬಳಕೆ ಮಾಡಿ ತೀವ್ರತರದ ಕರ್ತವ್ಯಲೋಪವೆಸಗಿರುತ್ತಾರೆ ಎಂಬ ಆರೋಪಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರಡಿ ವಿಚಾರಣೆ ಜರುಗಿಸಲು ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:28.10.2015 ರ ಆದೇಶದಲ್ಲಿ ಶ್ರೀ ಎ.ಎ.ಹುಲಗೇರಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿತ್ತು.

1. ಶ್ರೀ ಹೆಚ್.ಯಮನೂರಪ್ಪ, ಕಾರ್ಯಪಾಲಕ ಇಂಜಿನಿಯರ್,
2. ಶ್ರೀ ಎಂ.ಹೆಚ್. ಭೀಮಕ್ಕನವರ್, ಕಾರ್ಯಪಾಲಕ ಇಂಜಿನಿಯರ್,
3. ಶ್ರೀ ಬಿ.ಮಂಜುನಾಥ್, ಕಾರ್ಯಪಾಲಕ ಇಂಜಿನಿಯರ್,
4. ಶ್ರೀ ಕೆ.ಶಂಕರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್.
5. ಜಿ.ಎಸ್.ಸಾಕರೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್,
6. ಶ್ರೀ ಎಂ. ಆಂಜಿನಯ್ಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್,
7. ಶ್ರೀ ಜಿ.ಎಂ. ಕಂಚಿಮಠ, ಸಹಾಯಕ ಕಾರ್ಯಪಾಲಕ ಇಂಜಿನಿಯರ್,
8. ಶ್ರೀ ಜಿ.ಎನ್.ಪ್ರಕಾಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್,
9. ಶ್ರೀ ರಂಗಪ್ಪ ರಾಮದುರ್ಗ, ಸಹಾಯಕ ಇಂಜಿನಿಯರ್,
10. ಶ್ರೀ ಹಾಸ್ಮಿ, ಸಹಾಯಕ ಇಂಜಿನಿಯರ್,
11. ಶ್ರೀ ಸೈಯ್ಯದ್ ವಾಜೀದ ಅಲಿ, ಕಿರಿಯ ಇಂಜಿನಿಯರ್,

---2

12. ಸೈಯ್ಯದ್ ಅಭೀದ್ ಅಲಿ, ಕಿರಿಯ ಇಂಜಿನಿಯರ್,
13. ಎಸ್. ನಿರಂಜನ, ಕಿರಿಯ ಇಂಜಿನಿಯರ್,
14. ಶ್ರೀ ಚಂದ್ರಕಾಂತ್, ಕಿರಿಯ ಇಂಜಿನಿಯರ್,
15. ಶ್ರೀ ಕರಿಯಪ್ಪ, ಕಿರಿಯ ಇಂಜಿನಿಯರ್,
16. ಶ್ರೀ ಶೇಖ್ ಜಹೀರುದ್ದೀನ್, ಕಿರಿಯ ಇಂಜಿನಿಯರ್,
17. ಶ್ರೀ ಎಸ್.ಎಂ.ಅಸ್ಲಂ, ಕಿರಿಯ ಇಂಜಿನಿಯರ್,
18. ಶ್ರೀ ಎಸ್.ಬಿ.ಮಾಲೀಪಾಟೀಲ್, ಕಿರಿಯ ಇಂಜಿನಿಯರ್,
19. ಶ್ರೀ ಸೈಯ್ಯದ್ ಅಶ್ರಫ, ಕಿರಿಯ ಇಂಜಿನಿಯರ್,
20. ಶ್ರೀ ಎಂ.ಸಿ.ಚವಾಣ್, ಕಿರಿಯ ಇಂಜಿನಿಯರ್,

ಈ ಮಧ್ಯೆ ಮೇಲ್ಕಂಡ ಆರೋಪಿತ ಅಧಿಕಾರಿ/ನೌಕರರ ಪೈಕಿ ಶ್ರೀ ಕರಿಯಪ್ಪ, ಕಿರಿಯ ಇಂಜಿನಿಯರ್ ಇವರು ಭಾಗಿಯಾಗಿರುವುದು ಕಂಡು ಬರುವುದಿಲ್ಲವೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ಇವರು ತಮ್ಮ ಪತ್ರ ದಿ:21.03.2016 ರಲ್ಲಿ ಸರ್ಕಾರಕ್ಕೆ ವರದಿ ಮಾಡಿದ್ದರ ಹಿನ್ನಲೆಯಲ್ಲಿ ಸದರಿಯವರನ್ನು ಮೇಲೆ ಓದಲಾದ ಕ್ರಮ ಸಂ:3 ರ ಆದೇಶದಲ್ಲಿ ಶಿಸ್ತು ಕ್ರಮದಿಂದ ಕೈಬಿಡಲಾಗಿರುತ್ತದೆ.

ವಿಚಾರಣಾಧಿಕಾರಿಗಳಾದ ಶ್ರೀ ಎ.ಎ.ಹುಲಗೇರಿ ಇವರು ವಿಚಾರಣೆಯನ್ನು ಅಂತಿಮಗೊಳಿಸಿ, ಮೇಲೆ ಓದಲಾದ ಕ್ರಮಾಂಕ (6) ದಿನಾಂಕ:25.7.2016 ರಂದು ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯಲ್ಲಿ ಆಪಾದಿತರ ವಿರುದ್ಧ ಯಾವುದೇ ಆರೋಪಗಳು ಸಾಭೀತಾಗಿರುವುದಿಲ್ಲವೆಂದು ನಿರ್ಣಯಿಸಿರುತ್ತಾರೆ. ಸರ್ಕಾರವು ವಿಚಾರಣಾ ವರದಿಯನ್ನು ಪರಿಶೀಲಿಸಿ, ಪ್ರಕರಣದಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿರುವ ಆರೋಪಗಳು ಇರುವ ಕಾರಣ ಈ ಪ್ರಕರಣದಲ್ಲಿ ಒಳಗೊಂಡಿರುವ ಸುಮಾರು 21 ಕಾಮಗಾರಿಗಳನ್ನು ಮತ್ತೊಮ್ಮೆ ಸಮಗ್ರವಾಗಿ ಪರಿಶೀಲನೆ / ತನಿಖೆ ನಡೆಸುವುದು ಸೂಕ್ತವೆಂದು ತೀರ್ಮಾನಿಸಿ, ಮೇಲೆ ಓದಲಾದ ಕ್ರಮಾಂಕ 5 ರ ದಿನಾಂಕ:21.4.2018 ರ ಆದೇಶದಲ್ಲಿ ಪ್ರಕರಣದ ಕುರಿತು ವಿವರವಾದ ತನಿಖೆಯನ್ನು ನಡೆಸುವ ಸಲುವಾಗಿ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2ಎ) ರ ಅನುಸಾರ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (6) ರ ವಿವಿಧ ದಿನಾಂಕಗಳ ಪತ್ರಗಳಲ್ಲಿ ತನಿಖೆಗೆ ಅವಶ್ಯವಿರುವ ದಾಖಲೆಗಳನ್ನು ಅಂದರೆ ಪ್ರಶ್ನಿತ ಕಾಮಗಾರಿಗಳ ಮಂಜೂರಾದ ಅಂದಾಜು ಪಟ್ಟಿ, ಗುತ್ತಿಗೆ ಕರಾರು, ಅಳತೆ ಪುಸ್ತಕದ ಪ್ರತಿ, ಬಿಲ್ ಪ್ರತಿ, ಮುಕ್ತಾಯದ ವರದಿಯ ಪ್ರತಿ, ಕಾಮಗಾರಿ ಹಸ್ತಾಂತರದ ಪ್ರತಿಗಳನ್ನು ಈ ಕಛೇರಿ ಹಂತದಲ್ಲಿದ್ದ ಹಾಗೂ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು ಕಛೇರಿಯಲ್ಲಿ ಲಭ್ಯವಿದ್ದ ದಾಖಲೆಗಳನ್ನು ಕ್ರೂಢೀಕರಿಸಿ, ಗೌರವಾನ್ವಿತ ಉಪಲೋಕಾಯುಕ್ತರ ಕಛೇರಿಗೆ ಸಲ್ಲಿಸಲಾಗಿರುತ್ತದೆ. ಅದ್ದಾಗ್ಯೂ, ಕೆಲವೊಂದು ಕಾಮಗಾರಿಗಳ ಬಿಲ್ ಪ್ರತಿಗಳು, ಅಳತೆ ಪುಸ್ತಕದ ಪ್ರತಿಗಳು ತಕ್ಷಣಕ್ಕೆ ಲಭ್ಯವಿರುವುದಿಲ್ಲ.

ಮಾನ್ಯ ಉಪಲೋಕಾಯುಕ್ತರವರ ಕಛೇರಿಯ ಕೋರಿಕೆ ಮೇರೆಗೆ ಲಭ್ಯವಾಗದಿರುವ ದಾಖಲೆಗಳನ್ನು ಒದಗಿಸುವ ಕುರಿತು ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ ವಿಭಾಗ, ರಾಯಚೂರು ಇವರೊಂದಿಗೆ ಪತ್ರ ವ್ಯವಹಾರ ಮಾಡಿದ್ದು, ಸದರಿಯವರು ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಈಗಾಗಲೇ ಸಲ್ಲಿಸಲಾಗಿದ್ದು, ಉಳಿದ ದಾಖಲೆಗಳು ತಕ್ಷಣಕ್ಕೆ ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ.

---3

ಏತನ್ಮಧ್ಯೆ, ವಿಚಾರಣಾಧಿಕಾರಿಯವರ ವರದಿಯ ಮೇಲೆ ಅಂತಿಮ ನಿರ್ಣಯ ಕೈಗೊಳ್ಳದಿರುವ ಕುರಿತು ಹಾಗೂ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ತನಿಖೆಗೆ ವಹಿಸಿರುವುದನ್ನು ಆಕ್ಷೇಪಿಸಿ ಆಪಾದಿತರ ಪೈಕಿ ಶ್ರೀ ಶೇಖ್ ಮಹಮದ್ ಅಸ್ಲಂ, ಕಿರಿಯ ಇಂಜಿನಿಯರ್ (ವಿಶೇಷ ದರ್ಜೆ) ಮತ್ತು ಶ್ರೀ ಎಸ್. ನಿರಂಜನ, ಕಿರಿಯ ಇಂಜಿನಿಯರ್ (ವಿಶೇಷ ದರ್ಜೆ) ಇವರುಗಳ ಕೆ.ಎ.ಟಿಯಲ್ಲಿ ಅರ್ಜಿ ಸಂಖ್ಯೆ:5574-75/18 ನ್ನು ಹಾಗೂ ಶ್ರೀ ಶಂಕರ್ ಕೆ, ಹಿಂದಿನ ಸ.ಕಾ.ಇಂ ಮತ್ತು ಶ್ರೀ ಸೈಯದ್ ವಾಜೀದ್ ಅಲಿ, ಕಿ.ಇಂ ಇವರು ಅರ್ಜಿ ಸಂಖ್ಯೆ:4813-14/2018 ನ್ನು ಸಲ್ಲಿಸಿ ಅವರಿಗೆ ಸಂಬಂಧಿಸಿದಂತೆ ದಿ:21.4.2018 ರ ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ತಂದಿರುತ್ತಾರೆ.

ಪ್ರಕರಣದಲ್ಲಿ ಒಳಗೊಂಡಿರುವ ಕಾಮಗಾರಿಗಳು 2005-06 ರಿಂದ 2008-09 ನೇ ಸಾಲಿನ ಅವಧಿಯಲ್ಲಿ ನಡೆದಿದ್ದು, ಈಗಾಗಲೇ ಇಲಾಖಾ ವಿಚಾರಣೆ ಪೂರ್ಣಗೊಂಡಿದ್ದು ಆಪಾದಿತರ ಪೈಕಿ ಕೆಲವು ನೌಕರರು ಮಾನ್ಯ ಕೆ.ಎ.ಟಿಯಲ್ಲಿ ಅರ್ಜಿ ಸಲ್ಲಿಸಿ ತಡೆಯಾಜ್ಞೆ ಪಡೆದಿರುವ ಕಾರಣ ವಿಚಾರಣಾ ವರದಿಯ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11ಎ ಅನುಸಾರ ಕ್ರಮವಹಿಸುವುದು ಸೂಕ್ತವೆಂದು ಸರ್ಕಾರವು ಭಾವಿಸಿದೆ.

ಈ ಕಾರಣದಿಂದ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ಲೋಕಾಯುಕ್ತ ಕಾಯ್ದೆ-1984 ರ ಕಲಂ 7(2) (ಎ) ರ ಅನುಸಾರ ವಹಿಸಿರುವುದನ್ನು ಹಿಂಪಡೆದು ಸರ್ಕಾರದ ಹಂತದಲ್ಲಿ ವಿಚಾರಣಾ ವರದಿಯ ಬಗ್ಗೆ ಪರಿಶೀಲಿಸಿ ಸೂಕ್ತ ನಿರ್ಣಯ ಕೈಗೊಳ್ಳಲು ನಿರ್ಧರಿಸಿರುತ್ತದೆ. ಆದ್ದರಿಂದ ಈ ಆದೇಶ.

**ಆದೇಶ ಸಂಖ್ಯೆ: ಗ್ರಾಅಪ 12 ಇಎನ್‌ಕ್ಯೂ 2015, ಬೆಂಗಳೂರು, ದಿನಾಂಕ:09.11.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಸರ್ಕಾರವು ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ರಾಯಚೂರು ಜಿಲ್ಲಾ ಪಂಚಾಯತ್‌ಗೆ ಬಿಡುಗಡೆಯಾದ ಅನುದಾನವನ್ನು ಸಮರ್ಪಕವಾಗಿ ಬಳಸದೇ 21 ಕಾಮಗಾರಿಗಳಲ್ಲಿ ಹಣ ದುರುಪಯೋಗವಾಗಿರುವ ಆರೋಪದ ಕುರಿತು ತನಿಖೆಯನ್ನು ನಡೆಸುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 12 ಇಎನ್‌ಕ್ಯೂ 2015, ದಿನಾಂಕ:21.4.2018ರಲ್ಲಿ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ -1984 ರ ಕಲಂ 7(2ಎ) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರಿಗೆ ವಹಿಸಿರುವುದನ್ನು ಹಿಂಪಡೆದು ಆದೇಶಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

09/11/201

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ/ಜಲ ಸಂಪನ್ಮೂಲ ಇಲಾಖೆ/ ಸಣ್ಣ ನೀರಾವರಿ ಇಲಾಖೆ,
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಬೆಂಗಳೂರು. (ಮುಖ ಪತ್ರದೊಂದಿಗೆ)
4. ಕಾರ್ಯದರ್ಶಿ, **ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಅಭಿವೃದ್ಧಿ ಭವನ, ಐವಾನ್-ಶಾಹಿ, ಕಲಬರಗಿ-585102**
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು.
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.

8. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣಾ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
10. ಸಂಬಂಧಿಸಿದ ಅಧಿಕಾರಿ/ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ಇವರ ಮುಖಾಂತರ)
11. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ .
12. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಉಪ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
13. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.